ವಿವರಣಾ ಪತ್ರ—೨

ನಳದ ನೀರು ಸರಬರಾಜು ಯೋಜನೆಗಳು ರಾಜ್ಯ ಮತ್ತು ಕೇಂದ್ರ ವಲಯದಲ್ಲಿ ಮಂಜೂರಾಗಿರುವ ಹಳ್ಳಿಗಳ ವಿವರಗಳು (ಜಿಲ್ಲಾವಾರು)

	ಜಿಲ್ಲೆ	ನಳದ ನೀರು ಸರಬರಾಜು ಯೋಜನೆಗಳು ಮಂಜೂರಾಗಿರುವ ಹಳ್ಳಿಗಳ ಸಂಖ್ಯೆ		
		(ಎನ್‌ಆರ್‌ಡಬ್ಲ್ಯೂಎಸ್) ರಾಜ್ಯ ವಲಯ	(ಎಆರ್‌ಡಬ್ಲ್ಯೂಎಸ್) ಕೇಂದ್ರ ವಲಯ	ಮೊತ್ತ
೧.	ಬೆಂಗಳೂರು	೧೯೬	೫೮	೨೫೪
೨.	ಕೋಲಾರ	೧೮೦	೪೬	೨೨೬
೩.	ತುಮಕೂರು	೧೬೩	೫೩	೨೧೬
೪.	ಚಿತ್ರದುರ್ಗ	೧೭೮	೫೮	೨೩೬
೫.	ಶಿವಮೊಗ್ಗ	೧೪೧	೫೨	೧೯೩
೬.	ಚಿಕ್ಕಮಗಳೂರು	೧೨೯	೩೬	೧೬೫
೭.	ಮೈಸೂರು	೨೭೯	೧೨೮	೪೦೭
೮.	ಮಂಡ್ಯ	೯೬	೭೭	೧೭೩
೯.	ಹಾಸನ	೧೫೭	೭೦	೨೨೭
೧೦.	ದಕ್ಷಿಣ ಕನ್ನಡ	೧೧೪	೨೫	೧೩೯
೧೧.	ಕೊಡಗು	೩೧	೨೦	೫೧
೧೨.	ಬೆಳಗಾವಿ	೨೨೬	೧೦೨	೩೨೮
೧೩.	ಧಾರವಾಡ	೨೫೫	೧೫೫	೩೯೦
೧೪.	ಬಿಜಾಪುರ	೧೬೯	೫೦	೨೧೯
೧೫.	ಉತ್ತರ ಕನ್ನಡ	೮೭	೧೩	೧೦೦
೧೬.	ರಾಯಚೂರು	೧೬೧	೪೨	೨೦೩
೧೭.	ಬಳ್ಳಾರಿ	೧೧೧	೩೮	೧೪೯
೧೮.	ಬೀದರ್	೮೮	೪೦	೧೨೮
೧೯.	ಗುಲ್ಬರ್ಗಾ	೨೧೨	೮೯	೩೦೧
	ಮೊತ್ತ	೨೯೫೩	೧೧೫೨	೪೧೦೫

ಬಾಗಲ ಕೋಟೆ ಟೌನ್‌ಷಿಪ್ ಅನ್ನು ಹೊಸದಾಗಿ ಕಟ್ಟುವ ಬಗ್ಗೆ

೫೫ (೧೩) ಶ್ರೀ ಕೆ.ಹೆಚ್. ಪಾಟೀಲ್ (ಗದಗ್).—ಮುನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಬಾಗಲಕೋಟೆ ಟೌನ್‌ಷಿಪ್ ಅನ್ನು ಪುನರ್ ರಚಿಸುವ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಆ) ಈ ಬಗ್ಗೆ ಈಗಾಗಲೇ ಖರ್ಚು ಮಾಡಿರುವ ಹಣವೆಷ್ಟು ?

ಇ) ಸುಮಾರು ಯಾವ ತಾರೀಖಿಗೆ ಮುಗಿಯಬಹುದು?

ಪ್ರೊ. ಎ. ಲಕ್ಷ್ಮೀಸಾಗರ್ (ಸಂಸದೀಯ ವ್ಯವಹಾರ ಮತ್ತು ಆಹಾರ ನಾಗರೀಕ ಸರಬರಾಜು ಸಚಿವರು).—

ಅ) ಬಾಗಲಕೋಟೆ ಟೌನ್‌ಷಿಪ್ ಅನ್ನು ಪುನರ್‌ರಚಿಸುವ ಕಾರ್ಯಕ್ರಮವಿಲ್ಲ. ಆದರೆ ಈಗ ಮುಳುಗಡೆಯಾಗುವ ಪ್ರದೇಶದ ಜನರನ್ನು ಬೇರೆ ಕಡೆ ಪುನರ್ವಸತಿಗೊಳಿಸುವ ಒಂದು ಹೊಸ

''ಟೌನ್‌ಷಿಪ್'' ಅನ್ನು ಈಗಿರುವ ನಗರದ ಹತ್ತಿರ ಎತ್ತರವಾದ ಜಾಗದಲ್ಲಿ ಕಟ್ಟಲು ಸರ್ಕಾರ ಉದ್ದೇಶಿಸಿದೆ.

ಆ) ಈಗಾಗಲೇ ಖರ್ಚು ಮಾಡಿರುವ ಹಣ ರೂ. ೫೪.೨೫ ಲಕ್ಷ. ಈ ಯೋಜನೆಗೆ ತಗಲುವ ಅಂದಾಜು ವೆಚ್ಚ ರೂ. ೯೧.೭೫ ಕೋಟಿ.

ಇ) ಸುಮಾರು ಹತ್ತು ವರ್ಷಗಳು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವೆಚ್ಚದ ಬಗ್ಗೆ

೫೭ (೨೧೯) ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ). – ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಾಧಿಕಾರದ ಸಿಬ್ಬಂದಿ ನಿರ್ವಹಣಾ ವೆಚ್ಚವು ಸಿಬ್ಬಂದಿ ಹೊರತುಪಡಿಸಿದ ಬಾಬ್ತುಗಳಿಗೆ ಆಗಿರುವ ಒಟ್ಟು ವೆಚ್ಚ ?

ಆ) ೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬ರ ಸಾಲಿನಲ್ಲಿ ಪ್ರಾಧಿಕಾರ ಲಾಭಗಳಿಸಿದೆಯೇ ? ಹಾಗಿದ್ದರೆ ಎಷ್ಟು ವಿವರಿಸಿ ?

ಇ) ಈ ಸಾಲುಗಳಲ್ಲಿ ಯಾವುದಾದರೂ ಲೆಕ್ಕ ಪರಿಶೋಧನೆ ಮಾಡಿದ ಆಡಿಟ್‌ರವರ ವರದಿ ಇರುವುದೇ ?

ಈ) ಈ ಸಾಲುಗಳಿಗಿಂತ ಹಿಂದಿನ ಸಾಲುಗಳಿಗೆ ಆಡಿಟ್ ಮಾಡಿದ ಬಗ್ಗೆ ವರದಿಗಳಿವೆಯೇ

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು).—

ಅ) ಈ ಕೆಳಗಿನಂತಿದೆ.

ವರ್ಷ	ಸಿಬ್ಬಂದಿ ನಿರ್ವಹಣಾ ಕಾರ್ಯಕ್ಕಾಗಿ ಮಾಡಲಾದ ವೆಚ್ಚ	ಸಿಬ್ಬಂದಿ ನಿರ್ವಹಣಾ ಕಾರ್ಯ ಹೊರತು ಪಡಿಸಿ ಮಾಡಲಾದ ವೆಚ್ಚ
	ರೂ.	ರೂ. ಲಕ್ಷಗಳಲ್ಲಿ
೧೯೮೩-೮೪	೧೩೫.೮೭	೧೬೨೩.೮೬
೧೯೮೪-೮೫	೧೩೩.೪೨	೧೯೫೯.೨೬
೧೯೮೫-೮೬	೨೦೫.೪೭	೨೬೪೫.೯೮

ಆ) ಈ ವರ್ಷದ ಅವಧಿಯಲ್ಲಿ ಲಾಭ ಮತ್ತು ನಷ್ಟಗಳನ್ನು ಸೂಚಿಸಲು ಸಾಧ್ಯವಿರುವುದಿಲ್ಲ.

ಇ) ಹೌದು.

೧೯೮೩-೮೪ ರಿಂದ ೧೯೮೫-೮೬ ರವರೆಗೆ ಆಡಿಟ್ ತೆಗೆದುಕೊಳ್ಳಬೇಕಾಗಿರುತ್ತದೆ.

ಈ) ಇರುತ್ತದೆ.

ಜನತಾ ವಸತಿ ಯೋಜನೆ ಬಗ್ಗೆ

೫೮ (೨೨೧) ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಗ್ರಾಮಾಂತರ ಅಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಸತಿ, ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗ್ರಾಮಾಂತರ ಪ್ರದೇಶದಲ್ಲಿ ಭೂರಹಿತ ಮತ್ತು ನಿವೇಶನ ರಹಿತ ಕುಟುಂಬಗಳೆಷ್ಟು ?

ಆ) (i) ಅವರಲ್ಲಿ ಎಷ್ಟು ಜನಗಳಿಗೆ ಇದುವರೆವಿಗೂ ನಿವೇಶನಗಳನ್ನು ಹಂಚಲಾಗಿದೆ;

(ii) ಮನೆಗಳನ್ನು ಕಟ್ಟಿಕೊಳ್ಳಲು ಎಷ್ಟು ಕುಟುಂಬಗಳಿಗೆ ಸಹಾಯವನ್ನು ಮಾಡಲಾಗಿದೆ ?(೧೯೮೬ರ ಮಾರ್ಚ್ ಅಂತ್ಯದಲ್ಲಿದ್ದಂತೆ ಮಾಹಿತಿಗಳನ್ನು ಕೊಡುವುದು)